ಟಿ.ನರಸೀಪುರ ತಾಲ್ಲೂಕಿನಲ್ಲಿ ಹಳದಿ ಕಾರ್ಡ್ ಕಾರ್ಯಕ್ರಮ.

305(3062)

ಡಾ: ಭಾರತಿ ಶಂಕರ್ (ಟಿ.ನರಸೀಪುರ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಟಿ.ನರಸೀಪುರ ತಾಲ್ಲೂಕಿನಲ್ಲಿ ಹಳದಿ ಕಾರ್ಡ್ ಕಾರ್ಯಕ್ರಮದಲ್ಲಿ ಗುರುತಿಸಲಾಗಿರುವ ಫಲಾನುಭವಿಗಳೆಷ್ಟು?

ಆ) ಈವರೆವಿಗೆ ಹಳದಿ ಕಾರ್ಡ್ ಕಾರ್ಯಕ್ರಮಕ್ಕೆ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ?

ಇ) ಈ ಕಾರ್ಯಕ್ರಮದಲ್ಲಿ ಖರೀದಿಸಲಾಗಿರುವ ಔಷಧಿಗಳು ಫಲಾನುಭವಿಗಳನ್ನು ತಲುಪದೇ ತಾಲ್ಲೂಕು ಕೇಂದ್ರದಲ್ಲೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದರೆ ಈ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಡಾ: ಎ.ಬಿ.ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 76,062.

ಆ) ರೂ.51.965/-

ಇ) ಈ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ದೂರುಗಳು ಬಂದಿಲ್ಲ.

ಈ) ಉದ್ಭವಿಸುವುದಿಲ್ಲ.

ಡಾ: ಭಾರತಿ ಶಂಕರ್: ಮಾನ್ಯ ಅಧ್ಯಕ್ಷರೇ, ಈ ಉತ್ತರವನ್ನು ನೋಡಿದಾಗ ಕೆಲವು ಉಪ ಪ್ರಶ್ನೆಗಳು ನನ್ನ ಮನಸ್ಸಿನಲ್ಲಿ ಉದ್ಭವವಾಗಿವೆ. ಹಳದಿ ಕಾರ್ಡ್ ಕಾರ್ಯಕ್ರಮ ಫಲ ಕೊಡುತ್ತಿದೆಯೇ ಮತ್ತು ಇದನ್ನು ಮುಂದುವರೆಸುವ ಯೋಚನೆ ಸರ್ಕಾರಕ್ಕೆ ಇದೆಯೇ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಈ ಕಾರ್ಯಕ್ರಮ ಜಾರಿಗೆ ಬಂದ ಮೇಲೆ ಒಳ್ಳೆಯ ಪ್ರತಿಫಲ ಸಿಕ್ಕಿದೆ. ಅದಕ್ಕಾಗಿ ಇದನ್ನು ಮುಂದುವರೆಸಲಾಗುವುದು.

ಡಾ: ಭಾರತಿ ಶಂಕರ್: ಫಲ ಕೊಟ್ಟಿದೆ, ಆದ್ದರಿಂದ ಇದನ್ನು ಮುಂದುವರೆಸುತ್ತೇವೆ. ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಇದು ಬಹಳ ಸಂತೋಷದ ವಿಚಾರ.

ಈವರೆಗೆ ಟಿ.ನರಸೀಪುರ ತಾಲ್ಲೂಕಿನಲ್ಲಿ 76 ಸಾವಿರ ಜನ ಹಳದಿ ಕಾರ್ಡ್ ಫಲಾನುಭವಿಗಳನ್ನು ಗುರುತು ಮಾಡಿದ್ದಾರೆ. ಆದರೆ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣ ಕೇವಲ 51,965 ರೂಪಾಯಿಗಳು. ಅಂದರೆ ಯಾವರೀತಿಯ ಗುಣಮಟ್ಟದ ಔಷಧಿಗಳನ್ನು ಸಮಾಜದಲ್ಲಿರುವ ಹರಿಜನರು ಮತ್ತು ಹಿಂದುಳಿದವರಿಗೆ ಈ ಹಣದಲ್ಲಿ ಕೊಡಲು ಸಾಧ್ಯ? ಆದ್ದರಿಂದ ಇದನ್ನು ಹೆಚ್ಚಿಸುವಂಥ ಅಗತ್ಯವಿದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮವನ್ನೇನಾದರೂ ತೆಗೆದುಕೊಳ್ಳುತ್ತಾರೆಯೇ ಎನ್ನುವುದನ್ನು ಹೇಳಬೇಕು ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹಳದಿ ಕಾರ್ಡ್ ಡ್ರಗ್ಸ್ ಕೊಡತಕ್ಕಂತದ್ದು ಇದು ಪ್ರಾಯೋಗಿಕವಾಗಿ ತೆಗೆದುಕೊಂಡಿರುವ ಕಾರ್ಯಕ್ರಮ. ಈ ಯೋಜನೆಯಡಿಯಲ್ಲಿ ಕೊಡುವಂಥ ಔಷಧಿಗಳು, It is over and above Rs.50.000/- We are spending for the supply of drugs through primary health centres. ಮತ್ತು 5 ಸಾವಿರ ರೂಪಾಯಿ ಮೌಲ್ಯದ ಔಷಧಿಗಳನ್ನು ಸಬ್ ಸೆಂಟರ್ ಮುಖಾಂತರ ಕೂಡ ಒದಗಿಸಿ ಕೊಡುತ್ತೇವೆ. ಒಟ್ಟು 55 ಸಾವಿರ ರೂಪಾಯಿಗಳ ಔಷಧಿಗಳಲ್ಲದೆ, ವಿಶ್ವಬ್ಯಾಂಕ್ ನೆರವಿನಿಂದ ಅಡಿಷನಲ್ ಔಷಧಿಗಳನ್ನು ಸಪ್ಲೈ ಮಾಡಲಾಗುವುದು.

ಡಾ: ಭಾರತಿ ಶಂಕರ್: ಡಾ:ಸುದರ್ಶನ್‌ರವರ ನೇತೃತ್ವದಲ್ಲಿ ಒಂದು ಟಾಸ್ಕ್ ಫೋರ್ಸನ್ನು ಸರ್ಕಾರ ನೇಮಕ ಮಾಡಿತ್ತು. ಅದು ಬಹಳ ಸ್ವಾಗತಾರ್ಹವಾದ ವಿಚಾರ. ಅವರು ಈ ಹಳದಿ ಕಾರ್ಡ್ ಕಾರ್ಯಕ್ರಮದ ವಿಚಾರದಲ್ಲಿ ಏನಾದರೂ ವರದಿ ಕೊಟ್ಟಿದ್ದಾರೆಯೇ? ಅದರಲ್ಲೇನಾದರೂ ಬದಲಾವಣೆ ಮಾಡಬೇಕು ಎಂದು ವರದಿ ಕೊಟ್ಟಿದ್ದಾರೆಯೇ ಎಂದು ಈ ಸಂದರ್ಭದಲ್ಲಿ ಕೇಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಅವರು ಕೊಟ್ಟ ವರದಿ ಆಧಾರದ ಮೇಲೆ ನಾನು ಹೇಳಿದ್ದು. 26,798 ಫಲಾನುಭವಿಗಳಿಗೆ ಇದರಿಂದ ಪ್ರಯೋಜನ ದೊರಕಿದೆ ಮತ್ತು ಇದು ಬಹಳ ಉತ್ತಮವಾದ ಪ್ರತಿಫಲ ಕೊಟ್ಟಂಥ ಕಾರಣದಿಂದ ಇದನ್ನು ಹೆಚ್ಚು ಬಲಯುತವಾಗಿ ಮಾಡಬೇಕು, ಶಕ್ತಿಯುತವಾಗಿ ಮಾಡಬೇಕು ಎನ್ನುವುದು ಸರ್ಕಾರದ ಆಲೋಚನೆಯಾಗಿದೆ.

ಡಾ: ಭಾರತಿ ಶಂಕರ್: ಈ ಕಾರ್ಯಕ್ರಮದಲ್ಲಿ ಖರೀದಿಸಲಾಗಿರುವ ಔಷಧಿಗಳು ಫಲಾನುಭವಿಗಳನ್ನು ತಲುಪದೇ ತಾಲ್ಲೂಕು ಕೇಂದ್ರದಲ್ಲೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ನಾನು ಕೇಳಿದ ಪ್ರಶ್ನೆಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ದೂರುಗಳು ಬಂದಿಲ್ಲ ಎಂದು ಹೇಳಿದ್ದಾರೆ. ಈ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನ ಸೆಳೆಯುವುದೇನೆಂದರೆ, ತಾಲ್ಲೂಕು ಕೇಂದ್ರಗಳಲ್ಲಿ ಈ ಔಷಧಿಗಳನ್ನು ಬೇರೆ ಪರ್ಪಸ್‌ಗೋಸ್ಕರ

ಉಪಯೋಗಿಸಲಾಗುತ್ತಿದೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಘಟಕಗಳಿಗೆ ಇದು ತಲುಪುತ್ತಿಲ್ಲ ಎಂದು ನನಗೆ ಬಹಳಷ್ಟು ದೂರುಗಳು ಬಂದಿವೆ. ಇದರ ಬಗ್ಗೆ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ಎ.ಬಿ.ಮಾಲಕರೆಡ್ಡಿ: ಅದು ತಾಲ್ಲೂಕು ಮಟ್ಟದಲ್ಲಿ ಮಾಡತಕ್ಕಂಥ ಕಾರ್ಯಕ್ರಮವಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ವೈದ್ಯರು ಮತ್ತು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿರುವ ವೈದ್ಯರು ಮತ್ತು ಮಹಿಳಾ ವೈದ್ಯರು, ಈ ಮೂವರು ಜೊತೆಗೂಡಿ ಐದಾರು ಗ್ರಾಮಗಳ ನಡುವೆ ಇರುವ ಸಬ್‌ಸೆಂಟರ್‌ನಲ್ಲಿ ಹೋಗಿ ಕ್ಯಾಂಪ್ ಮಾಡುತ್ತಾರೆ, ಅಲ್ಲಿಗೆ ಹಳದಿ ಕಾರ್ಡ್ ಹೊಂದಿರುವವರು ಬಂದು ತಮಗೆ ಏನಾದರೂ ಖಾಯಿಲೆ ಇದ್ದರೆ ತೋರಿಸಿಕೊಂಡು ಹೋಗುತ್ತಾರೆ. ಇದು ಜನರ ಮಧ್ಯದಲ್ಲಿ ಹೋಗಿ ಮಾಡುವಂತಹ ಕಾರ್ಯಕ್ರಮ. ತಾಲ್ಲೂಕು ಮಟ್ಟದಲ್ಲಿ ಕುಳಿತು ದುರುಪಯೋಗ ಮಾಡುವಂಥ ಕಾರ್ಯಕ್ರಮವಲ್ಲ.

ಅಧ್ಯಕ್ಷರು: ಮಾನ್ಯ ಚನ್ನಿಗಪ್ಪನವರೇ ನಿಮ್ಮ ಪ್ರಶ್ನೆಗೆ ಸರ್ಕಾರದವರು ಸಮಯ ಕೇಳಿರುವುದರಿಂದ ಮುಂದಿನ ವಾರದಲ್ಲಿ ತೆಗೆದುಕೊಳ್ಳೋಣ.

ಶ್ರೀ ಸಿ.ಚನ್ನಿಗಪ್ಪ: ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ, ಹಣದ ದುರುಪಯೋಗವಾಗಿರುವ ಪ್ರಶ್ನೆಗೆ ಸರ್ಕಾರ ಸಮಯ ಕೇಳಿದರೆ ಹೇಗೆ? ಹಾಗಾದರೆ ಇದಕ್ಕೆ ಯಾವತ್ತು ನಮಗೆ ಉತ್ತರ ಕೊಡಿಸುತ್ತೀರಿ?

ಅಧ್ಯಕ್ಷರು: ಮಾಹಿತಿ ತರಿಸಬೇಕು ಎನ್ನುವ ಉದ್ದೇಶದಿಂದ ಸರ್ಕಾರ ಸಮಯ ಕೇಳಿದೆ, ನಿಮಗೆ ಬುಧವಾರದ ದಿವಸ ಇದಕ್ಕೆ ಉತ್ತರ ಕೊಡಿಸೋಣ.

ಶಿಕ್ಷಕರಿಗೆ ಪ್ರಶಸ್ತಿ ನೀಡುವ ಬಗ್ಗೆ.

307(2955)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಉನ್ನತ ಶಿಕ್ಷಣಕ್ಕಾಗಿ 2000-2001ರಲ್ಲಿ ನಿಗದಿಪಡಿಸಿರುವ ಹಣವೆಷ್ಟು?